# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎:0816-2255650, 2273511,ಫ್ಯಾಕ್ಸ್ :0816-2270719


ಸಂಖ್ಯೆ : ತು.ವಿ.: ಪ.ವಿ.:ವಿ.ನಿ.-09:2025-26:95 ದಿನಾಂಕ:06.05.2025

## : ಅಧಿಸೂಚನೆ :

**DOUBLE DURATION**

**ವಿಷಯ : 2024-2025ರ ಶೈಕ್ಷಣಿಕ ವರ್ಷದಲ್ಲಿ ನಡೆಯಲಿರುವ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಅವಧಿ ಪೂರೈಸಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.**

ಉಲ್ಲೇಖ: ನಾಲ್ಕನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ:07.03.2025

* * * * *

2024-2025ರ ಶೈಕ್ಷಣಿಕ ವರ್ಷದಲ್ಲಿ ನಡೆಯಲಿರುವ ಸ್ನಾತಕೋತ್ತರ ಎಲ್ಲಾ ಪದವಿಗಳ **ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ಪರೀಕ್ಷೆಗಳಿಗೆ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಅವಧಿ ಪೂರೈಸಿರುವ** (ಶೈಕ್ಷಣಿಕ ವಿಭಾಗದಿಂದ ಪ್ರವೇಶಾನುಮೋದನೆ ಪಡೆದಿರುವಂತಹ) **ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಮಾತ್ರ** ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಅವಧಿ ಪೂರೈಸಿರುವ **(Double Duration)** ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಂಡು EMS ತಂತ್ರಾಂಶದಲ್ಲಿ ವಿವರಗಳನ್ನು ನಮೂದಿಸುವುದು.

ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಸಂಯೋಜಕರು ಮತ್ತು ಕಾಲೇಜು ಪ್ರಾಂಶುಪಾಲರು EMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸುವುದು. ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಪರಿಶೀಲಿಸಿ EMS ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಪರೀಕ್ಷೆ ತೆಗೆದುಕೊಳ್ಳುವವರ ಅಂಕಿ-ಅಂಶಗಳನ್ನು ಬಾಹ್ಯವಾಗಿಯೂ ಕ್ರೋಢೀಕರಿಸಿ ಶುಲ್ಕದ ವಿವರಗಳೊಂದಿಗೆ ವಿಶ್ವವಿದ್ಯಾನಿಲಯಕ್ಕೆ **31.05.2025 ದಿನಾಂಕದೊಳಗೆ** ಸಲ್ಲಿಸತಕ್ಕದ್ದು.

### ಗಮನಿಸಬೇಕಾದ ದಿನಾಂಕಗಳು

| | | |
|---|---|---|
| 1. | ಪರೀಕ್ಷಾ ಶುಲ್ಕ ಪಾವತಿಸಲು ಪ್ರಾರಂಭ ದಿನಾಂಕ | 09.05.2025 |
| 2. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 28.05.2025 |
| 3. | ವಿದ್ಯಾರ್ಥಿಗಳಿಗೆ ರೂ 100/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 30.05.2025 |
| 4. | ವಿದ್ಯಾರ್ಥಿಗಳಿಗೆ ರೂ 500/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 01.05.2025 |
| 5. | ಕಾಲೇಜಿನವರು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ವಿವರಗಳನ್ನು EMS ಮೂಲಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 02.06.2025 |

### ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕದ ವಿವರಗಳು (Double Duration 2019-20)

| ಕ್ರ.ಸ | ಸೆಮಿಸ್ಟರ್/ವಾರ್ಷಿಕ | ಕೋರ್ಸ್ (ಪೂರಕ ವಿದ್ಯಾರ್ಥಿಗಳಿಗೆ ಮಾತ್ರ) | ಮೂರು ಅಥವಾ ಮೂರಕ್ಕಿಂತ ಹೆಚ್ಚು ವಿಷಯಗಳಿಗೆ ಮತ್ತು ಇದರ ಜೊತೆಗೆ ಇತರೆ ಶುಲ್ಕಗಳು ಸಹ ಪಾವತಿಸುವುದು | ಪೂರಕ (ಒಂದು ವಿಷಯಕ್ಕೆ) |
|---|---|---|---|---|
| 1. | I,II III ಮತ್ತು IV ನೇ ಸೆಮಿಸ್ಟರ್ | ಎಂ.ಎ./ಎಂ.ಕಾಂ./ಎಂ.ಕಾಂ.ಇನ್‌ಫಾರ್ಮೇಷನ್, ಸಿಸ್ಟಮ್/ಎಂ.ಎಸ್ಸಿ/ /ಎಂ.ಎಸ್‌ಕಮ್ಯೂನಿಕೇಷನ್/ಎಂ.ಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ/ಎಂ.ಎಲ್.ಐ.ಎಸ್ಸಿ | 5000.00 | 1500.00 |
| 2. | | ಎಂ.ಎಸ್.ಡಬ್ಲ್ಯು. | 5000.00 | 1500.00 |
| 3. | | ಎಂ.ಎಸ್ಸಿ. ಜೀವತಂತ್ರಜ್ಞಾನ/ಸೂಕ್ಷ್ಮಜೀವಶಾಸ್ತ್ರ | 5000.00 | 1500.00 |
| 4. | | P.G.Diploma in Coconut Plantation/ Environmental Impact. | 5000.00 | 1500.00 |
| 5. | | ಎಂ.ಬಿ.ಎ | 5000.00 | 1500-00 |
| 6. | | ಎಂ.ಸಿ.ಎ | 5000.00 | 1500-00 |

(ಪು.ತಿ.ನೋ)

| | | |
|---|---|---|
| ಇತರೆ ಶುಲ್ಕಗಳು ಎಲ್ಲಾ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು. (ಅನ್ವಯಿಸುವ ಶುಲ್ಕಗಳು ಮಾತ್ರ) : | | |
| 1. | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | 500.00 |
| 2. | ಆನ್ ಲೈನ್ ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 100.00 |
| 3. | ಅರ್ಜಿ ಪರಿಶೀಲನಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 100.00 |
| 4. | ಪರೀಕ್ಷಾ ಸಿದ್ದಾತ ಶುಲ್ಕ (Process fee) | 40.00 |
| 5 | ಪ್ರಾಯೋಗಿಕ ಶುಲ್ಕ (per practical) | 150.00 |
| 6 | ಪ್ರಾಜೆಕ್ಟ್ ಶುಲ್ಕ (per project) | 200.00 |
| 7 | ಕಿರು ಪ್ರಬಂಧ ಶುಲ್ಕ (per Dissertation) | 200.00 |
| 8 | ಮೌಖಿಕ ಸಂದರ್ಶನ (per viva-voce) | 150.00 |

ಸೂಚನೆ: ಈ ಮೇಲ್ಕಂಡ ಕೋಷ್ಟಕದಲ್ಲಿರುವ ಪರೀಕ್ಷಾ ಶುಲ್ಕವು EMS ತಂತ್ರಾಂಶದ ಮುಖಾಂತರ ಶುಲ್ಕವನ್ನು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಖಾತೆಗೆ ಪಾವತಿಸುವುದು ಹಾಗೂ ಮುದ್ರಿತ ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗ/ಕಾಲೇಜು ಮುಖ್ಯಸ್ಥರಿಗೆ ಸಲ್ಲಿಸುವುದು.

ಸೂಚನೆಗಳು :

1. ಅವಧಿ ಪೂರೈಸಿದ ವಿದ್ಯಾರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಶುಲ್ಕವನ್ನು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಖಾತೆಗೆ SBI Collect ಮುಖಾಂತರ ಶುಲ್ಕವನ್ನು ಪಾವತಿಸುವುದು ಪಾವತಿಸಿರುವ ವಿವರಗಳನ್ನು ಒಂದು ಪ್ರತಿಯನ್ನು ಕಾಲೇಜು/ ವಿಭಾಗಗಳಿಗೆ ಸಲ್ಲಿಸುವುದು, ಸಲ್ಲಿಸಿರುವ ವಿವರಗಳನ್ನು EMS ತಂತ್ರಾಂಶದಲ್ಲಿ ಕಾಲೇಜು/ ಸಂಬಂಧ ಪಟ್ಟ ವಿಭಾಗದವರು ನಮೂದಿಸುವುದು.
2. ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳು ಕಿರು ಪ್ರಬಂಧ ಶುಲ್ಕ ಹಾಗೂ ಮೌಖಿಕ ಸಂದರ್ಶನ ಶುಲ್ಕವನ್ನು ಪಾವತಿಸತಕ್ಕದ್ದು.
3. **ಪರೀಕ್ಷಾ ಕೇಂದ್ರ ಹೊಂದಿರುವ ಕಾಲೇಜಿನವರು ತಮ್ಮ ಕೇಂದ್ರದಲ್ಲಿ ಪರೀಕ್ಷೆ ನಡೆಯುವ ಒಟ್ಟು ದಿನಗಳಲ್ಲಿ ಒಂದು ದಿನದ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿ ಪ್ರತಿ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯವು ವಿಭಾಗವಾರು ನಿಗದಿಪಡಿಸಿರುವ ದರಗಳಂತೆ ಪ್ರತ್ಯೇಕ ಹುಂಡಿಗಳನ್ನು ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು**.

ದಿನಾಂಕ: 20.01.2023ರ ಸಿಂಡಿಕೇಟ್ ಸಭಾ ನಿರ್ಣಯದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಸರ್ಕಾರದ ಡಿಬಿಟಿ (Direct Beneficiary Transfer) ಯೋಜನೆಯಡಿಯಲ್ಲಿ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಂಬಂಧಪಟ್ಟ ಕಾಲೇಜಿಗಾಗಲಿ ಅಥವಾ ವಿಶ್ವವಿದ್ಯಾನಿಲಯಕ್ಕಾಗಲಿ ವಿದ್ಯಾರ್ಥಿ ವೇತನವು ಮಂಜೂರಾಗದ ಹಿನ್ನೆಲೆಯಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕವನ್ನು ಸೆಮಿಸ್ಟರ್‌ವಾರು ಕಡ್ಡಾಯವಾಗಿಪಾವತಿಸಿಕೊಳ್ಳುವುದು (ನವೀನ & ಪೂರಕ) ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.

**ವಿ.ಸೂ.: ಪರೀಕ್ಷಾ ಶುಲ್ಕ ಪಾವತಿಸಿರುವ ಪಟ್ಟಿಯನ್ನು ದ್ವಿ-ಪ್ರತಿಗಳಲ್ಲಿ ಪರೀಕ್ಷಾಂಗ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಒಂದು ಪ್ರತಿಯನ್ನು ದಿನಾಂಕ:31.05.2025 ರಂದು ತಪ್ಪದೇ ಸಲ್ಲಿಸುವುದು.**

ಪ್ರಾಯೋಗಿಕ ಪರೀಕ್ಷೆಗಳನ್ನು ಸೈದ್ಧಾಂತಿಕ ಪರೀಕ್ಷೆಗಳ ನಂತರ ನಿಗಧಿಪಡಿಸಲಾದ ದಿನಾಂಕದೊಳಗೆ ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳಿಂದ ಅನುಮೋದನೆ ಪಡೆದುಕೊಂಡು ನಡೆಸುವುದು.

ಎಲ್ಲಾ, ಮುಖ್ಯಸ್ಥರು/ನಿರ್ದೇಶಕರು/ಸಂಯೋಜಕರು/ಪ್ರಾಂಶುಪಾಲರು ಸಹಕರಿಸಬೇಕಾಗಿ ಕೋರಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು (ಪರೀಕ್ಷಾಂಗ)

ಗೆ,

1. ಅಧ್ಯಕ್ಷರು/ ಸಂಯೋಜಕರು /ನಿರ್ದೇಶಕರು / ಪ್ರಾಂಶುಪಾಲರು/ ವಿವಿಧ ಸ್ನಾತಕೋತ್ತರ ವಿಭಾಗಗಳು ಮತ್ತು ವಿವಿಧ ಸ್ನಾತಕೋತ್ತರ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಅಧ್ಯಕ್ಷರು / ಸಂಯೋಜಕರು /ನಿರ್ದೇಶಕರು / ಪ್ರಾಂಶುಪಾಲರು/ ವಿವಿಧ ಸ್ನಾತಕೋತ್ತರ ವಿಭಾಗಗಳು ತುಮಕೂರು ವಿಶ್ವವಿದ್ಯಾನಿಲಯದ ಜ್ಞಾನಸಿರಿ ಕ್ಯಾಂಪಸ್, ಬಿದರಕಟ್ಟೆ, ತುಮಕೂರು.
3. ಅಧ್ಯಕ್ಷರು ಸ್ನಾತಕೋತ್ತರ ವ್ಯವಹಾರ ಆಡಳಿತ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಪ್ರಾಂಶುಪಾಲರು/ನಿರ್ದೇಶಕರು, ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಮರಳೂರು, ತುಮಕೂರು.

5. **ಸಂಯೋಜಕರು, ಸ್ನಾತಕೋತ್ತರ ಎಂ.ಸಿ.ಎ ವಿಭಾಗ, ಮೇಳೆಕೋಟೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
6. **ಸಂಯೋಜಕರು, ಸ್ನಾತಕೋತ್ತರ ಎಂ.ಸಿ.ಎ, ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ, ತಿಪಟೂರು.**
7. **ಪ್ರಾಂಶುಪಾಲರು ಶೇಷಾದ್ರಿಪುರಂ ಕಾಲೇಜು, #3, ವಿಕಾಸ ಭಾರತಿ, ಕಲ್ಪತರು ಬಡಾವಣೆ, ಗಂಗಸಂದ್ರ, ಮೇಳೆಕೋಟೆ, ತುಮಕೂರು–572 105.**

**ಪ್ರತಿಗಳು:**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್–2, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–01.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು (ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಗಳ/ಕುಲಸಚಿವರ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು– ವಿಶ್ವವಿದ್ಯಾನಿಲಯದ ಅಂತರ್ಜಾಲ (Website) ದಲ್ಲಿ ಇಂದೇ ಪ್ರಕಟಿಸುವುದು.
7. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಕಛೇರಿ ಪ್ರತಿ.